ಕ.ರಾ.ರ.ಸಾ. ಸಂಸ್ಥೆಯು ಗುಲ್ಬರ್ಗ ವಿಭಾಗದಲ್ಲಿ ಕಂಡ ಲೋಪದೋಷಗಳು

೮೪೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) .—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗುಲ್ಬರ್ಗ ವಿಭಾಗದ ಯಾವುದೇ ಲೋಪ-ದೋಷ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು) .—

(ಅ) ಹೌದು

(ಆ) ಗುಲ್ಬರ್ಗ ವಿಭಾಗದ ಕಾರ್ಯಚರಣೆಯ ದಕ್ಷತೆಯನ್ನು ಹೆಚ್ಚಿಸಲು ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗಿದೆ.

ಕಲಮವಾಡಿ ಯೋಜನೆಯು ಚಿಕ್ಕೋಡಿ ತಾಲ್ಲೂಕಿಗೆ ನೀರು

೮೦೧) ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ) .—ಮಾನ್ಯ ಲೋಕೋಪಯೋಗಿ ಮಂತ್ರಿಗಳು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಮಹಾರಾಷ್ಟ್ರ ರಾಜ್ಯದ ಕಲಮವಾಡಿ ಯೋಜನೆಯಿಂದ ಚಿಕ್ಕೋಡಿ ತಾಲ್ಲೂಕಿಗೆ ನೀರು ಬರುತ್ತಿದೆಯೇ ?

(ಆ) ಹಾಗಿದ್ದಲ್ಲಿ ಪೂರ್ತ ಹಣವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೊಡಲಾಗಿದೆಯೇ ಹಾಗಿಲ್ಲದಲ್ಲಿ ಯಾವಾಗ ಕೊಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) .—

(ಅ) ಹೌದು

(ಆ) ಮಹಾರಾಷ್ಟ್ರ ಸರ್ಕಾರಕ್ಕೆ ಈವರೆಗೆ ಯೋಜನೆಯಲ್ಲಾಗಿರುವ ಪ್ರಗತಿಗನುಗುಣವಾಗಿ ೧೨ ಕೋಟಿ ರೂ. ಗಳನ್ನು ಪಾವತಿ ಮಾಡಬೇಕಾಗಿದೆ. ಈವರೆವಿಗೆ ೪ ಕೋಟಿ ರೂ.ಗಳನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ. ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಒಂದು ಕೋಟಿ ರೂ. ಗಳ ಅನುದಾನ ಈ ಯೋಜನೆಗೆ ರಾಜ್ಯದ ಹಣಸಂಪನ್ಮೂಲವನ್ನನುಸರಿಸಿ ಕರ್ನಾಟಕ ರಾಜ್ಯ ನೀಡಬೇಕಾದ ಪಾಲಿನ ಮೌಲ್ಯವನ್ನು ಭರಿಸಲಾಗುವುದು.

ಕೇಂದ್ರ ಸರ್ಕಾರದಲ್ಲಿ ಲೋಕೋಪಯೋಗಿ ಇಲಾಖೆಯು ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳ ಬಾಕಿ

೮೬೩. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) .—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು ದಯವಿಟ್ಟು ಉತ್ತರಿಸುವರೆ :

(ಅ) ಕೇಂದ್ರ ಸರ್ಕಾರದಲ್ಲಿ ಲೋಕೋಪಯೋಗಿ ಇಲಾಖೆಯ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳು ಬಾಕಿ ಇದೆಯೇ ?

(ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ಈ ಪ್ರಸ್ತಾವನೆಗಳು ಇದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು .—

(ಅ) ನೂತನವಾಗಿ ಹನ್ನೊಂದು ರಾಷ್ಟ್ರೀಯ ಹೆದ್ದಾರಿಗಳ ಘೋಷಣೆ ಹಾಗೂ ಪರಿಷ್ಕೃತ ಕೇಂದ್ರ ರಸ್ತೆ ನಿಧಿಯ ಕಾರ್ಯಕ್ರಮದ ೧೯೮೯-೯೦ ಮತ್ತು ೧೯೯೦-೯೧ನೇ ಸಾಲಿನ ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಸಾರಿಗೆ ಮಂತ್ರಾಲಯದಲ್ಲಿ ಇವೆ.

(ಆ) ನೂತನವಾಗಿ ರಾಷ್ಟ್ರೀಯ ಹೆದ್ದಾರಿ ಘೋಷಣೆಯ ಪ್ರಸ್ತಾವನೆಯು ೧೭ ವರ್ಷಗಳಿಂದಲೂ ಹಾಗೂ ಪರಿಷ್ಕೃತ ಕೇಂದ್ರ ರಸ್ತೆ ನಿಧಿಯ ಕೇಸುಗಳ ಪ್ರಸ್ತಾವನೆಯು ಒಂದು ವರ್ಷಗಳಿಗಿಂತ ಹೆಚ್ಚಾಗಿ ಬಾಕಿ ಇದೆ.